# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **334**

ಸದಸ್ಯರ ಹೆಸರು : **ಶ್ರೀ ಎನ್. ರವಿಕುಮಾರ್**

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 06-03-2020

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಖಾಸಗಿ ಸಾರಿಗೆ ಸಂಸ್ಥೆಯವರು ಕಾರ್ಯ ನಿರ್ವಹಿಸುತ್ತಿದ್ದಾರೆ: | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಖಾಸಗಿ ಸಾರಿಗೆ ಸಂಸ್ಥೆಯವರು ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ-66ರನ್ವಯ ಸಂಬಂಧಪಟ್ಟ ಸಾರಿಗೆ ಪ್ರಾಧಿಕಾರಗಳಿಗೆ ಅರ್ಜಿ ಸಲ್ಲಿಸಿ, ರಹದಾರಿ ಮಂಜೂರಾದ ಮಾರ್ಗಗಳಲ್ಲಿ/ಪ್ರದೇಶಗಳಲ್ಲಿ ಖಾಸಗಿ ಸಾರಿಗೆ ಪ್ರವರ್ತಕರು ಕಾರ್ಯಾಚರಣೆ ಮಾಡುತ್ತಿದ್ದಾರೆ. |
| ಆ) | ಖಾಸಗಿ ಸಾರಿಗೆ ಸಂಸ್ಥೆಯವರು ಹಬ್ಬದ ದಿನಗಳಂದು ಮತ್ತು ಸರ್ಕಾರಿ ರಜಾ ದಿನಗಳಂದು ಸಂಚರಿಸುವ ಬಸ್ಸುಗಳ ಟಿಕೇಟು ದರಗಳನ್ನು ಅತಿ ಹೆಚ್ಚು ಏರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ: | ಖಾಸಗಿ ಸಾರಿಗೆ ಸಂಸ್ಥೆಯವರು ಹಬ್ಬದ ದಿನಗಳಂದು ಮತ್ತು ಸರ್ಕಾರಿ ರಜಾ ದಿನಗಳಂದು ಬಸ್ಸುಗಳ ಟಿಕೇಟು ದರಗಳನ್ನು ಏರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 67(1)(i) ರಲ್ಲಿ ಮಜಲು ವಾಹನಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ:ಸಾರಿಇ 97 ಸಾಇಪ 2013, ದಿನಾಂಕ:31-07-2013ರಲ್ಲಿ ಹಬ್ಬ-ಹರಿದಿನಗಳು, ಜಾತ್ರೆಗಳು ಇತರೆ ಸಂದರ್ಭಗಳಲ್ಲಿ ನಿಗದಿತ ದರಕ್ಕಿಂತ ಒಂದೂವರೆ ಪಟ್ಟು ದರ ವಸೂಲಿ ಮಾಡಲು ಅವಕಾಶವಿರುತ್ತದೆ.<br>ಅನಧಿಕೃತವಾಗಿ ಸಂಚರಿಸುವ ಮತ್ತು ರಹದಾರಿ ನಿಬಂಧನೆಗಳನ್ನು ಉಲ್ಲಂಘಿಸಿ ಸಂಚರಿಸುತ್ತಿರುವ ಖಾಸಗಿ ಬಸ್ಸುಗಳನ್ನು ತೀವ್ರವಾಗಿ ತಪಾಸಣೆ ಮಾಡಲಾಗುತ್ತಿದೆ. ಸದರಿ ತಪಾಸಣಾ ಕಾರ್ಯವು ನಿರಂತರವಾಗಿ ಜಾರಿಯಲ್ಲಿದೆ.<br>ಏಪ್ರಿಲ್-2019 ರಿಂದ ಜನವರಿ-2020 ರವರೆಗೆ ಅನಧಿಕೃತವಾಗಿ ಸಂಚರಿಸುವ ಮತ್ತು ರಹದಾರಿ ನಿಬಂಧನೆಗಳನ್ನು ಉಲ್ಲಂಘಿಸಿ ಸಂಚರಿಸುತ್ತಿದ್ದ ಖಾಸಗಿ ಬಸ್ಸುಗಳ ತನಿಖಾ ಕಾರ್ಯದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಇ | ಕಳೆದ 6 ತಿಂಗಳಿನಲ್ಲಿ ಈ ರೀತಿ ದರ ಏರಿಸಿರುವ ಎಷ್ಟು ಬಸ್ಸುಗಳ ಪರವಾನಿಗೆಯನ್ನು ರದ್ದುಗೊಳಿಸಲಾಗಿದೆ: | 2019-20ನೇ ಜನವರಿ ಮಾಹೆಯವರಗೆ ಅನಧಿಕೃತವಾಗಿ ಸಂಚರಿಸುವ ಮತ್ತು ರಹದಾರಿ ನಿಬಂಧನೆಗಳನ್ನು ಉಲ್ಲಂಘಿಸಿ ಸಂಚರಿಸುತ್ತಿದ್ದ ಖಾಸಗಿ ಬಸ್ಸುಗಳ 82 ರಹದಾರಿಗಳನ್ನು ಅಮಾನತ್ತುಗೊಳಿಸಲಾಗಿದೆ. |

--2

| | | |
|---|---|---|
| ಈ | ಸರ್ಕಾರಿ ಬಸ್ಸುಗಳನ್ನು ಲೋಕಲ್ ಸಾರಿಗೆಯ ರೂಪದಲ್ಲಿ ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಬಳಸಲಾಗುತ್ತಿದೆ: ಎಷ್ಟು ಬಸ್ಸುಗಳನ್ನು ಬಳಸಲಾಗುತ್ತಿದೆ: (ಜಿಲ್ಲಾವಾರು ಮಾಹಿತಿ ನೀಡುವುದು) | ಸರ್ಕಾರಿ ಬಸ್ಸುಗಳನ್ನು ಲೋಕಲ್ ಸಾರಿಗೆಯ ರೂಪದಲ್ಲಿ ರಾಜ್ಯದ ಜಿಲ್ಲೆಗಳಲ್ಲಿ ಬಳಸಲಾಗುತ್ತಿರುವ ಬಸ್ಸುಗಳ ವಿವರವನ್ನು **"ಅನುಬಂಧ-2"** ದಲ್ಲಿ ಒದಗಿಸಲಾಗಿದೆ. |
| ಉ | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮಾರ್ಗಗಳಲ್ಲಿ (Route) ಸರ್ಕಾರಿ ಬಸ್ಸುಗಳನ್ನು ಸಾರ್ವಜನಿಕ ಸಾರಿಗೆಯ ರೂಪದಲ್ಲಿ ಬಳಸಲಾಗುತ್ತಿದೆ: ಎಷ್ಟು ಬಸ್ಸುಗಳನ್ನು ಬಳಸಲಾಗುತ್ತಿದೆ: ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ: | ಕರ್ನಾಟಕ ರಾಜ್ಯ ರಸ್ತೆ ನಿಗಮದ ಮಂಗಳೂರು ಮತ್ತು ಪುತ್ತೂರು ವಿಭಾಗಗಳ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 435 ಮಾರ್ಗಗಳಲ್ಲಿ 415 ಸಾಮಾನ್ಯ ಅನುಸೂಚಿಗಳಿಂದ ಸ್ಥಳೀಯ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.<br><br>ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಒದಗಿಸುವ ಅವಶ್ಯಕತೆ ಕುರಿತು ಪರಿಶೀಲನೆಯಲ್ಲಿರುತ್ತದೆ. |

ಟಿಡಿ 12 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

# ಅನುಬಂಧ –1

ಹಬ್ಬದ ಮತ್ತು ಸರ್ಕಾರದ ರಜೆ ದಿನಗಳಂದು ಅತಿಹೆಚ್ಚು ಬಸ್ ಟಿಕೆಟ್ ದರ ಪಡೆದು ಸಂಚರಿಸುವ ಖಾಸಗಿ ವಾಹನಗಳ ವಿರುದ್ಧ ನಡೆಸಿದ ತಪಾಸಣಾ ವಿವರಗಳು ದಿನಾಂಕ: 01–04–2019 ರಿಂದ 31–01–2020 ರ ವರೆಗೆ

| ವಾಹನದ ವರ್ಗ | ತಪಾಶಿಸಿದ ವಾಹನಗಳ ಸಂಖ್ಯೆ | ದಾಖಲಿಸಿದ ಪ್ರಕರಣಗಳ ಸಂಖ್ಯೆ | ವಶಪಡಿಸಿದ ವಾಹನಗಳ ಸಂಖ್ಯೆ | ತೆರಿಗೆ | ದಂಡ | ಒಟ್ಟು |
|---|---|---|---|---|---|---|
| ಒಪ್ಪಂದ ವಾಹನ | 215 | 81 | 0 | 399600 | 41000 | 440600 |
| ಮಜಲು ವಾಹನ | 40 | 6 | 0 | 0 | 0 | 0 |
| ಅಖಿಲ ಭಾರತ ಪ್ರವಾಸಿ ವಾಜನ | 325 | 76 | 0 | 99900 | 33700 | 133600 |
| **ಒಟ್ಟು** | **580** | **163** | **0** | **499500** | **74700** | **574200** |

"ಅನುಬಂಧ-2"

| ಕ್ರ. ಸಂ. | ಜಿಲ್ಲೆ | ಸಾಮಾನ್ಯ ಸಾರಿಗೆ ಬಸ್ಸುಗಳ ಸಂಖ್ಯೆ |
|---|---|---|
| ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ | | |
| 1 | ಬೆಂಗಳೂರು ನಗರ | 60 |
| 2 | ಬೆಂಗಳೂರು ಗ್ರಾಮಾಂತರ | 87 |
| 3 | ರಾಮನಗರ | 210 |
| 4 | ತುಮಕೂರು | 314 |
| 5 | ಕೋಲಾರ | 281 |
| 6 | ಚಿಕ್ಕಬಳ್ಳಾಪುರ | 195 |
| 7 | ಮೈಸೂರು | 712 |
| 8 | ಮಂಡ್ಯ | 236 |
| 9 | ಹಾಸನ | 334 |
| 10 | ಚಿಕ್ಕಮಗಳೂರು | 112 |
| 11 | ದಕ್ಷಿಣಕನ್ನಡ | 415 |
| 12 | ಉಡುಪಿ | 67 |
| 13 | ಕೊಡಗು | 33 |
| 14 | ದಾವಣಗೆರೆ | 177 |
| 15 | ಶಿವಮೊಗ್ಗ | 166 |
| 16 | ಚಿತ್ರದುರ್ಗ | 131 |
| 17 | ಚಾಮರಾಜನಗರ | 121 |
| ಒಟ್ಟು | | **3651** |
| **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ** | | |
| 18 | ಬೆಂಗಳೂರು ನಗರ | 5963 |
| 19 | ಬೆಂಗಳೂರು ಗ್ರಾಮಾಂತರ | 125 |
| 20 | ರಾಮನಗರ | 69 |
| ಒಟ್ಟು | | **6157** |
| **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ** | | |
| 21 | ಧಾರವಾಡ | 181 |
| 22 | ಬೆಳಗಾವಿ | 536 |
| 23 | ಬಾಗಲಕೋಟೆ | 257 |
| 24 | ಗದಗ | 239 |
| 25 | ಹಾವೇರಿ | 238 |
| 26 | ಉತ್ತರ ಕನ್ನಡ (ಕಾರವಾರ) | 180 |
| ಒಟ್ಟು | | **1731** |
| **ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ** | | |
| 27 | ಕಲಬುರಗಿ | 492 |
| 28 | ಬೀದರ | 282 |
| 29 | ಯಾದಗೀರ | 161 |
| 30 | ರಾಯಚೂರು | 254 |
| 31 | ಬಳ್ಳಾರಿ | 367 |
| 32 | ಕೊಪ್ಪಳ | 170 |
| 33 | ವಿಜಯಪುರ | 402 |
| ಒಟ್ಟು | | **2128** |
| ಒಟ್ಟಾರೆ (ನಾಲ್ಕೂ ಸಾರಿಗೆ ಸಂಸ್ಥೆಗಳು) | | **13667** |